(ಆ) ಜನವರಿ ೧೯೮೩ರ ಅಂತ್ಯದವರೆಗೆ ೯ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಿದೆ.

(ಇ) ೬೧ ಗ್ರಾಮಗಳು (ಎರಡು ಯೋಜನೆಗಳಿಂದ)

(ಈ) ಈ ಗುರಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಹೊಂದಿದೆ.

ಹಿಂದಿನ ಮುಖ್ಯಮಂತ್ರಿಯವರ ಹೆಲಿಕಾಪ್ಟರ್ ಪ್ರಯಾಣದ ಬಗ್ಗೆ,

೪೮. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದ ಹಿಂದಿನ ಮುಖ್ಯ ಮಂತ್ರಿಗಳು ಒಟ್ಟು ಎಷ್ಟು ಸಲ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಮಾಡಿದರು;

(ಆ) ಅವರ ಒಂದು ವರ್ಷದ ಭೂ ಜಲ ವಾಯು ಮಾರ್ಗದ ವೆಚ್ಚ ರಾಜ್ಯ ಸರ್ಕಾರಕ್ಕೆ ಎಷ್ಟು ಬಂದಿದೆ ವಿವರಗಳನ್ನು ತಿಳಿಸುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು),—

(ಅ) ೧೮೨ ಸಲ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಮಾಡಿರುತ್ತಾರೆ.

(ಆ) ಅವರ ಒಂದು ವರ್ಷದ ಭೂ ಮತ್ತು ವಾಯು ಮಾರ್ಗದ ವೆಚ್ಚ ಅನುಕ್ರಮವಾಗಿ ರೂ. ೪೩,೭೦೫–೦೦ ಮತ್ತು ರೂ. ೯೪೫೧ ೦೦ ಆಗಿದೆ. ಅವರು ಜಲ ಮಾರ್ಗದಲ್ಲಿ ಯಾವುದೇ ಪ್ರಯಾಣವನ್ನು ಕೈಗೊಂಡಿರುವುದಿಲ್ಲ.

೪೯. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ವಿಷಯಗಳಿಗೆ ಉತ್ತರಿಸುವರೇ ?

ಅ) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಎಂಬ ಕೈಗಾರಿಕೆಯನ್ನು ಖಾಸಗಿಯವರಿಂದ ಸರ್ಕಾರದವರು ವಹಿಸಿಕೊಂಡಿರುವುದು ನಿಜವೇ;

ಆ) ಸರ್ಕಾರದವರ ನೆರವು ಸಮರ್ಪಕವಾಗಿಲ್ಲದಿರುವುದರಿಂದ ಈ ಕೈಗಾರಿಕೆ ಇನ್ನೂ ಕಷ್ಟಗಳನ್ನೆದುರಿಸುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ;

ಇ) ಈ ಕೈಗಾರಿಕೆಯ ಆಡಳಿತ ವರ್ಗದವರು ಕೈಗಾರಿಕಾಭಿವೃದ್ಧಿಗೆ ಸೂಚನೆಯನ್ನು ಸರ್ಕಾರಕ್ಕೆ ನೀಡಿದ್ದರೆ ಆ ಸೂಚನೆಗಳಾವುವು ;

ಈ) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್‌ನ ಬೆಳವಣಿಗೆಗೆ ಸರ್ಕಾರದವರು ಕೈಕೊಳ್ಳಬೇಕೆಂದಿರುವ ಕಾರ್ಯಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಿಗಳು).—

ಅ) ನಿಜ. ಖಾಸಗಿ ಜನರಿಂದ ನಡೆಸಲ್ಪಟ್ಟು ಕಾರ್ಖಾನೆಯು ಮುಚ್ಚಿ ಹೋಗಿತ್ತು. ನೌಕರರಿಗೆ ತೊಂದರೆಯಾಗುವ ಪರಿಸ್ಥಿತಿ ಬಂದಿದ್ದರಿಂದ ಜನವರಿ ೧೯೭೯ರಲ್ಲಿ ಈ ಕಾರ್ಖಾನೆಯನ್ನು ಸರ್ಕಾರವು ತನ್ನ ವಶಕ್ಕೆ ಕಾನೂನು ರೀತ್ಯಾ ತೆಗೆದುಕೊಂಡಿತು.

ಆ) ಅನೇಕ ವರ್ಷಗಳ ಖಾಸಗಿ ಆಡಳಿತ ಅಸಮರ್ಪಕವಾಗಿ ನಡೆದುದರಿಂದ ಕಾರ್ಖಾನೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಈ ಕಾರ್ಖಾನೆಯು ತೀವ್ರವಾದ ಆರ್ಥಿಕ ತೊಂದರೆಯಲ್ಲಿತ್ತು. ಸರ್ಕಾರವು ಈ ಸಂಸ್ಥೆಗೆ ಎಲ್ಲ ರೀತಿಯಲ್ಲಿ ಸಹಾಯ ಮಾಡಿದೆ ಕರ್ನಾಟಕ ರಿಲೀಫ್ ಆಂಡರ್ ಟೇಕಿಂಗ್ ಆ್ಯಕ್ಟ್ ರೀತಿಯಲ್ಲಿ ಕಂಪೆನಿಗೆ ಸಾಲಗಾರರಿಂದ ರಕ್ಷಣೆ ನೀಡಲಾಗಿದೆ ಸರ್ಕಾರದ ವತಿಯಿಂದ ದಕ್ಷ ಆಡಳಿತ ಮಂಡಳಿ ಮತ್ತು ಆಡಳಿತ ವರ್ಗ ಒದಗಿಸಲಾಗಿದೆ. ಇದುವರೆವಿಗೂ ೫೧ ಲಕ್ಷ ರೂಪಾಯಿಗಳ ಆರ್ಥಿಕ ಸಹಾಯವನ್ನು ಒದಗಿಸಲಾಗಿದೆ. ಆದುದರಿಂದ ಸರ್ಕಾರವು ಯಾವ ರೀತಿಯ ಸಹಾಯವನ್ನು ಈ ಕಾರ್ಖಾನೆಗೆ ಮಾಡಿಲ್ಲ ಎಂಬುದು ಸರಿಯಲ್ಲ.

ಇ) ಈ ಕಂಪನಿಯು ತೊಂದರೆಗಳನ್ನು ಪರಿಹರಿಸಿ ಪುನರುಜ್ಜೀವನಗೊಳಿಸಲು ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರವು ತಜ್ಞರಿಂದ ವರದಿ ಪಡೆದಿದೆ. ಈ ವರದಿಯ ಪ್ರಕಾರ ಈ ಕಂಪೆನಿಗೆ ೨.೨ ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ.

ಈ) ಹಣಕಾಸಿನ ಮತ್ತು ಇತರೆ ವ್ಯವಹಾರಗಳಲ್ಲಿ ಸದಾಹರಣೆಯನ್ನು ತಂದು ಹೆಚ್ಚು ಹೆಚ್ಚು ಉತ್ಪಾದನೆ ಮತ್ತು ಮಾರಾಟ ಮಾಡಿ ಕಾರ್ಖಾನೆಯನ್ನು ಲಾಭದಾಯಕವಾಗಿ ಮಾಡುವುದು ಮತ್ತು ತಾಂತ್ರಿಕ ಜ್ಞಾನಮಟ್ಟವನ್ನು ಸುಧಾರಿಸಿ ಮತ್ತು ಇತರೇ ಆಧುನಿಕ ತಾಂತ್ರಿಕತೆಯನ್ನು ಹೊಂದಿರುವ ಉಪಕರಣಗಳನ್ನು ಹೊರದೇಶ ತಯಾರಕರ ಸಹಯೋಗದಿಂದ ತಯಾರಿಸುವುದು ಮತ್ತು ಅದನ್ನು ಮಾರಾಟ ಮಾಡುವುದು.

ಖಂಡಸಾರಿಗಳಿಗೆ ಹೊಸದಾಗಿ ಪರವಾನಿಗೆಗಳನ್ನು ನೀಡದಿರುವುದು

೫೧. ಶ್ರೀ ಬಾಪೂಗೌಡ ದರ್ಶನಾಪೂರ (ಷಹಾಪೂರ್) —ಕೈಗಾರಿಕಾ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ಖಂಡಸಾರಿಗಳಿಗಾಗಿ ಹೊಸದಾಗಿ ಪರವಾನಿಗೆಗಳನ್ನು ನೀಡಬಾರದೆಂಬ ನೀತಿಯನ್ನು ಸರ್ಕಾರದವರು ಕೈಕೊಂಡಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಅಂತಹ ನಿರ್ಣಯಕ್ಕೆ ಬರಲು ಕಾರಣಗಳೇನು ;

ಇ) ಸದ್ಯಕ್ಕೆ ರಾಜ್ಯದಲ್ಲಿ ಕಾರ್ಯಾಚರಣೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಹಾಗೂ ಖಂಡಸಾರಿಗಳ ಸಂಖ್ಯೆ ಎಷ್ಟು ಹಾಗೂ ಕಬ್ಬು ಸಾಗುವಳಿಯಲ್ಲಿರುವ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಖಂಡಸಾರಿಗಳ ಸ್ಥಾಪನೆಗೆ ಕಬ್ಬು ಸಾಗುವಳಿಗೆ ಬೇಕಾಗುವ ಜಮೀನಿನ ವಿಸ್ತೀರ್ಣವೆಷ್ಟು ?*

ವಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಮೂಗನೂರ ಏತ ನೀರಾವರಿ ಕುರಿತಾಗಿ

೫೨. ಶ್ರೀ ನುಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹುನಗುಂದ ತಾಲ್ಲೂಕು ಮೂಗನೂರ ಗ್ರಾಮಕ್ಕೆ ೧೯೭೯ರಲ್ಲಿ ಏತ ನೀರಾವರಿ ಯೋಜನೆ ಆರಂಭವಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇನ್ನೂ ಪೂರ್ತಿಯಾಗಿಲ್ಲದಿರುವುದಕ್ಕೆ ಕಾರಣಗಳೇನು ;

ಇ) ಏತನೀರಾವರಿಯನ್ನು ಪೂರ್ಣಗೊಳಿಸುವ ವಿಚಾರ ಸರ್ಕಾರಕ್ಕೆ ಇದೆಯೇ ?

ಈ) ಇನ್ನೂ ಯಾವುದೇ ಹೆಚ್ಚಿನ ಏತ ನೀರಾವರಿ ಯೋಜನೆಗಳನ್ನು ಸರ್ಕಾರದವರು ರೂಪಿಸುವರೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ನಿಜವಲ್ಲ. ಆದರೆ ಈ ಯೋಜನೆಯ ಕೆಲಸವು ೧೯೭೮ರಲ್ಲಿ ಪ್ರಾರಂಭವಾಯಿತು.

ಆ) ಸಿವಿಲ್ ಕೆಲಸವು ಭಾಗಶಃ ಮುಗಿದಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಪವರ್ ಲೈನ್ ಎಳೆಯುವ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಕಾರಣಗಳಿಂದ ಕೆಲಸ ಪೂರ್ಣವಾಗಿಲ್ಲ.

ಇ) ಇದೆ.

ಈ) ಸದ್ಯಕ್ಕೆ ಇಲ್ಲ.

---

* Reply not received.